**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮುಂಡಗೋಡ.**

ಸಿಸಿ ನಂಃ 286/2019

ಸಿ ಡಬ್ಲುಃ 01

ಪಿ ಡಬ್ಲುಃ 01.

| | |
|---|---|
| ಸಾಕ್ಷಿದಾರರ ಹೆಸರು | ಮಹ್ಮದ ಪೂರಖಾನ ತಾಮಟಗಾರ |
| ತಂದೆಯ ಹೆಸರು | ಅಬ್ದುಲಗಪೂರ |
| ವಯಸ್ಸು | 39 ವರ್ಷ |
| ಉದ್ಯೋಗ | ಅಸಿಸ್ಟಂಟ್ ಮ್ಯಾನೇಜರ, ಎ.ಟಿ.ಎಂ ಆಪರೇಷನ್ಸ |
| ವಾಸ್ತವ್ಯ | ಇಸ್ಲಾಂಪುರ, ಹಳೆ ಹುಬ್ಬಳ್ಳಿ. |

ಸಾಕ್ಷಿಯನ್ನು ದಿನಾಂಕ **10.02.2026** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ದಿನಾಂಕಃ 30.11.2017 ರಂದು ನನಗೆ ಎಸ್.ಬಿ.ಐ ಬ್ಯಾಂಕ್ ರವರಿಂದ ಎ.ಟಿ.ಎಂ ನಲ್ಲಿ ಕಳ್ಳತನವಾಗಿದೆ ಎಂದು ಮಾಹಿತಿ ಬಂದಿದ್ದು, ಆ ಪ್ರಕಾರ ನಾನು ಸಿ.ಎಂ.ಎಸ್ ಕ್ಯಾಶ್ ಲೋಡಿಂಗ್ ಸಿಬ್ಬಂದಿಯಾದ ಚಾಸಾ 9 ಮಂಜುನಾಥ ಮತ್ತು ಎಸ್.ಬಿ.ಐ ಬ್ಯಾಂಕಿನ ಚೀಫ್ ಮ್ಯಾನೇಜರ ಆದ ಚಾಸಾ 8 ರವರೊಂದಿಗೆ ಹೋಗಿ ಪರಿಶೀಲಿಸಿದಾಗ, ಎ.ಟಿ.ಎಂ ಮಷೀನನ್ನು ಗ್ಯಾಸ್ ಕಟರ್ ನ್ನು ಬಳಸಿ, ಕಳ್ಳತನ ಮಾಡಿದ್ದಾಗಿ ತಿಳಿದುಬಂದಿತು. 32,11,200/- ರೂಪಾಯಿಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ. ಅದೇ ದಿವಸ ಕಳ್ಳತನವಾದ ಬಗ್ಗೆ ನಾನು ದೂರನ್ನು ದಾಖಲಿಸಿರುತ್ತೇನೆ. ಪೋಲಿಸರಿಗೆ ಡೆಪಾಸಿಟ್ ಸ್ಲಿಪ್ ಮತ್ತು ಇತರೇ ದಾಖಲಾತಿಗಳ ಜೇರಾಕ್ಸ ಪ್ರತಿಯನ್ನು ದೂರು ಕೊಡುವ ಕಾಲಕ್ಕೆ ಒದಗಿಸಿರುತ್ತೇನೆ. ಪೋಲಿಸರು ಸ್ಥಳದಲ್ಲಿ 3.25 ರಿಂದ 4.15 ರವರೆಗೆ ಪಂಚನಾಮೆ ಜರುಗಿಸಿರುತ್ತಾರೆ. ಪೋಲಿಸರು ಇನ್ನೊಂದು ಪಂಚನಾಮೆಯನ್ನು ಜರುಗಿಸಿದ್ದು, ಅದನ್ನು 5.00 ರಿಂದ 6.00 ಗಂಟೆಯವರೆಗೆ ಚಾಸಾ 3 ಮತ್ತು ಇನ್ನೂಬ್ಬರ ಸಮಕ್ಷಮ ಜರುಗಿಸಿರುತ್ತಾರೆ. ನನಗೆ ಇನ್ನೊಬ್ಬರ ಹೆಸರು ನೆನಪಿಲ್ಲ, ಅವರನ್ನು ನೋಡಿದರೆ ಗುರುತಿಸಬಲ್ಲೆ. ಪಂಚನಾಮೆಯನ್ನು ಜರುಗಿಸುವ ಕಾಲಕ್ಕೆ ಕಚ್ಚಾ ನಕಾಶೆಯನ್ನು ತಯಾರಿಸಿ, ಛಾಯಾ ಚಿತ್ರವನ್ನು ತೆಗೆದುಕೊಂಡಿರುತ್ತಾರೆ.

ದಿನಾಂಕಃ 25.02.2018 ಪೋಲಿಸರು ಇಬ್ಬರು ಕಳ್ಳರಾದ ಮೊಹ್ಮದ ಸುಹೀಲ್ ಖಾನ ಮತ್ತು ಮೌಲಾಲಿ ಕರ್ಜಗಿರವರನ್ನು ದಸ್ತಗಿರಿ ಮಾಡಿರುತ್ತೇವೆ ಎಂದು ಹೇಳಿದ್ದು, ಆಗ ನಾನು ಠಾಣೆಗೆ ಹೋಗಿದ್ದು, 1 ಮತ್ತು 2 ನೇ ಆರೋಪಿತರು ಗ್ಯಾಸ ಕಟರನ್ನು ಬಳಸಿ ಕಳ್ಳತನ ಮಾಡಿದ್ದಾಗಿ ಒಪ್ಪಿಕೊಂಡಿರುತ್ತಾರೆ.

**1 ಮತ್ತು 2 ನೇ ಆರೋಪಿತರನ್ನು ನೋಡಿದರೆ ಗುರುತಿಸುಬಲ್ಲೆ. ಈ ದಿನ ಆರೋಪಿತರು ನ್ಯಾಯಾಲಯಕ್ಕೆ ಗೈರು ಹಾಜರಿದ್ದು, ಆರೋಪಿತರ ಗುರುತಿಸುವಿಕೆಯ ಬಗ್ಗೆ ಆರೋಪಿತರ ಪರ ವಕೀಲರ ತಕರಾರು ಇರುವುದಿಲ್ಲ.**

ನ್ಯಾಯಾಲಯದ ಮುಂದಿರುವ ದೂರನ್ನು ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ, ಅದನ್ನು **ನಿಪಿ.1** ಎಂದು, ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ. 1 ಎ** ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ, ಅದನ್ನು **ನಿಪಿ.2** ಎಂದು, ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ.2 ಎ** ಎಂದು ಗುರುತಿಸಲಾಯಿತು.

ಸಾಕ್ಷಿಯು ತಾವು ದೂರಿನೊಂದಿಗೆ ಹಾಜರುಪಡಿಸಿದ ಎಲ್ಲಾ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಆದರೆ ಸದರಿ ದಾಖಲಾತಿಗಳ ನಕಲು ಪ್ರತಿಗಳು ಲಭ್ಯವಿದ್ದು, ಅದು ತನಿಖಾಧಿಕಾರಿಗಳ ಸಹಿ ಮತ್ತು ಸೀಲ್ ಇಲ್ಲದೇ ಇರುವ ಕಾರಣ ಸದರಿ ದಾಖಲಾತಿಯನ್ನು ಗುರತಿಸಿರುವುದಿಲ್ಲ.

ಸದರಿ ನಕಲು ಪ್ರತಿಗಳ ಮೂಲ ದಾಖಲಾತಿಗಳು ಸಿ.ಎಂ.ಎಸ್ ಕಚೇರಿಯಲ್ಲಿವೆ ಎಂದು ನುಡಿಯುತ್ತಾರೆ.

ನ್ಯಾಯಾಲಯದ ಮುಂದಿರುವ ಶ್ವಾನದಳದ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ, ಅದನ್ನು **ನಿಪಿ. 3** ಎಂದು, ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ. 3 ಎ** ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಘಟನಾ ಸ್ಥಳದ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ, ಅದನ್ನು **ನಿಪಿ. 4** ಎಂದು, ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ. 4 ಎ** ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ, ಅದನ್ನು **ನಿಪಿ. 5** ಎಂದು, ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ. 5 ಎ** ಎಂದು ಗುರುತಿಸಲಾಯಿತು.

2 ನೇ ಪಂಚನಾಮೆಯನ್ನು ಜರುಗಿಸುವ ಕಾಲಕ್ಕೆ ತೆಗೆದ ಛಾಯಾ ಚಿತ್ರವನ್ನು ನೋಡಿ ಗುರುತಿಸಿದ್ದು, ಸದರಿ ಛಾಯಾ ಚಿತ್ರವನ್ನು ಭಾ.ಸಾ.ಅ.ನಿ. ಕಲಂ 65 ಬಿ ಪ್ರಮಾಣ ಪತ್ರ ಮತ್ತು ಸಿ.ಡಿ ಗೆ ಒಳಪಟ್ಟು **ನಿಪಿ. 6** ಎಂದು, ಗುರುತಿಸಲಾಯಿತು.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲುಃ ಎ ಪಿ ಪಿ ಯವರಿಂದಃ**

ನಾನು ಮೊದಲನೇ ಪಂಚನಾಮೆ ಎಂದು ಹೇಳಿದ್ದು, ಅದು ಶ್ವಾನದಳದ ಪಂಚನಾಮೆಯಾಗಿದ್ದು, ಅದನ್ನು ಸಂಜೆ 4.15 ರಿಂದ 4.45 ಗಂಟೆಯವರೆಗೆ ಜರುಗಿಸಿರುತ್ತಾರೆ ಎಂದರೆ ಹೌದು.

ನಾನು ಎರಡನೇ ಪಂಚನಾಮೆ ಎಂದು ಹೇಳಿದ್ದು, ಅದು ಘಟನಾ ಸ್ಥಳದ ಪಂಚನಾಮೆಯಾಗಿರುತ್ತದೆ ಎಂದರೆಹೌದು.

ಶ್ವಾನದಳ ಪಂಚನಾಮೆಯನ್ನು ಜರುಗಿಸುವ ಕಾಲಕ್ಕೆ ಚಾಸಾ 3 ರವರೊಂದಿಗೆ ಚಾಸಾ 2 ಸಮೀರ ನಿಗೋನಿ ಎನ್ನುವವರು ಇನ್ನೊಬ್ಬ ಪಂಚರಾಗಿ ಸಹಕರಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ನಿಪಿ.6 ರಲ್ಲಿ ಕಾಣುವ ಚಾಸಾ 2 ಮತ್ತು ಚಾಸಾ 3 ರವರನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಛಾಯಾ ಚಿತ್ರವನ್ನು ನೋಡಿ ಅದರಲ್ಲಿ 3 ಎಂದು ಗುರುತಿಸಲಾದ ವ್ಯಕ್ತಿ 1 ನೇ ಆರೋಪಿ ಆಗಿರುತ್ತಾನೆ ಎಂದು ನುಡಿಯುತ್ತಾರೆ. ಸಾಕ್ಷಿಯು ಸದರಿ ಛಾಯಾ ಚಿತ್ರದಲ್ಲಿರುವ 1 ನೇ ಆರೋಪಿಯನ್ನು ಮತ್ತು ಎ.ಟಿ.ಎಂ ನ್ನು ನೋಡಿ ಗುರುತಿಸಿದ ಕಾರಣ, ಆರೋಪಿಯ ಗುರುತಿಸುವಿಕೆಗಾಗಿ ಸದರಿ

ಛಾಯಾ ಚಿತ್ರವನ್ನು ಭಾ.ಸಾ.ಅ.ನಿ. ಕಲಂ 65 ಬಿ ಪ್ರಮಾಣ ಪತ್ರ ಮತ್ತು ಸಿ.ಡಿ ಗೆ ಒಳಪಟ್ಟು **ನಿಪಿ. 7** ಎಂದು, ಗುರುತಿಸಲಾಯಿತು.

ನಿಪಿ.6 ರಲ್ಲಿ ನಾನು ತೋರಿಸುತ್ತಿರುವ ಎ.ಟಿ.ಎಂ ಯೇ ಈ ಛಾಯಾ ಚಿತ್ರದಲ್ಲಿ 1 ನೇ ಆರೋಪಿ ತೋರಿಸುತ್ತಿರುವ ಎ.ಟಿ.ಎಂ ಆಗಿರುತ್ತದೆ ಎಂದರೆ ಹೌದು.

**(ಈ ಹಂತದಲ್ಲಿ ಪಾಟೀ ಸವಾಲಿಗೆ ಆರೋಪಿತರ ವಕೀಲರು ಸಮಯವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

**ಪ್ರ ದ ನ್ಯಾದಂ ಮುಂಡಗೋಡ.**